ರೀತಿ ಕೆ.ಎಸ್.ಅಂಡ್.ಡಿ.ಎಲ್. ನಲ್ಲಿ 7363.99 ಲಕ್ಷ ರೂಪಾಯಿಗಳ ಲುಕ್ಸಾನಾಗಿದೆ. ಇದನ್ನು ಯಾವುದರ ಜೊತೆಗಾದರೂ ಮರ್ಜ್ ಮಾಡಿ ಬಿಡುತ್ತೀರಾ? ಇದರ ಬಗ್ಗೆ ಏನು ಮಾಡುತ್ತೀರಿ.

ಶ್ರೀ ಆರ್.ವಿ. ದೇಶಪಾಂಡೆ : ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಬಗ್ಗೆ ಕೇಳುತ್ತಿದ್ದಾರೆ. ಅದೂ ಹಾನಿ ಮಾಡುತ್ತಿದೆ. ಕಳೆದ ಒಂದು ವರ್ಷದಿಂದ it is showing the sigh of improvement. ಈ ವರ್ಷ ಅಲ್ಲಿ ಕಡಿಮೆ ಹಾನಿಯಾಗಬಹುದು. There is lot of improvement in that organisation. ಹಾಗೆ ಇದರ ಬಗ್ಗೆಯೂ ಯಾವ ಪ್ರಕಾರ ಸರ್ಕಾರ ಸಹಾಯ ಮಾಡಿ ರೀ-ಹ್ಯಾಬಿಲಿಟೇಟ್ ಮಾಡಬಹುದು ಎನ್ನುವುದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಹೆಚ್. ಶಿವಪ್ಪ : ಕೆಲವು ಕಂಪನಿಗಳು ಸತತವಾಗಿ ಲುಕ್ಸಾನನ್ನು ಅನುಭವಿಸುತ್ತಾ ಬಂದಿವೆ. ಈ ರೀತಿಯ ಲುಕ್ಸಾನು ಆಗಬೇಕಾದರೆ ತಾಂತ್ರಿಕವಾದ ಕಾರಣವೋ? ಅಥವಾ ಆಡಳಿತಾತ್ಮಕವಾದ ಕಾರಣವೋ? ಮಾರ್ಕೆಟಿಂಗ್ ಇಲ್ಲದಿದ್ದರೆ ಅದು ಎಷ್ಟರ ಮಟ್ಟಿಗೆ* ಕಾರಣ? ಯಾವುದು ಎಂಬುದನ್ನು ಇದರ ಬಗ್ಗೆ ತಪಾಸಣೆ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಾ? ಏಕೆಂದರೆ ಕೆಲವು ಕಂಪನಿಗಳು ಸತತವಾಗಿ ಲುಕ್ಸಾನನ್ನು ಅನುಭವಿಸುತ್ತಾ ಬಂದಿವೆ. What are the steps taken by the Government to rehabilitate or improve the present condition and has it come to the notice of the Government.

ಶ್ರೀ ಆರ್.ವಿ. ದೇಶಪಾಂಡೆ : ಇದು ಸರ್ಕಾರದ ಗಮನಕ್ಕೆ ಬರುತ್ತಿರುವುದರಿಂದಲೇ ನಾನು ನಿಮಗೆ ಉತ್ತರ ಕೊಡುತ್ತಿದ್ದೇನೆ. ನೇರವಾಗಿ ಯಾವ ಕೈಗಾರಿಕೆಗೆ ಯಾವ ಔಷಧಿ ಕೊಡಬೇಕು? ಯಾವ ಕಾರಣದಿಂದ ನಷ್ಟವಾಗುತ್ತಿದೆ ಎಂಬುದನ್ನು ಅಯಾ ಇಂಡಸ್ಟ್ರೀಸ್‌ಗಳನ್ನು ನೋಡಿ ಹೇಳಬಹುದು. Technicaal know-how ಏನು ಇದೆ ಅದು ಬಹಳ ಹಳೆಯದು ಇದೆ. ಇಂಟ್ರಿಸ್ಟ್ ಬರ್ಡನ್ ಬಹಳ ಬರುತ್ತಿದೆ. ಇನ್ನೂ ಕೆಲವು ಕಾರ್ಖಾನೆಗಳಲ್ಲಿ ಕಾರ್ಮಿಕರ ಸಂಖ್ಯೆ ಹೆಚ್ಚು ಇದೆ. ಹೀಗಾಗಿ ಹಲವಾರು ಬೇರೆ ಬೇರೆ ಕಾರಣಗಳು ಇವೆ. ಆದಷ್ಟು ಬೇಗ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಸಮಾಧಾನವಾಗುವ ಹಾಗೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಕರ್ನಾಟಕ ಕೈಗಾರಿಕೆಗಳಲ್ಲಿ ಬಂಡವಾಳ ಹೂಡಿದ ವಿದೇಶಿ ಬಂಡವಾಳದಾರರು

432 - ಶ್ರೀ ವೈ. ರಾಮಕೃಷ್ಣ (ಆನೇಕಲ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತ ಸರ್ಕಾರದ ಕೈಗಾರಿಕಾ ಉದಾರೀಕರಣ ನೀತಿಯನ್ನು ಅನುಸರಿಸಿ ಕಳೆದ ಮೂರು ತಿಂಗಳುಗಳಿಂದ ಸರ್ಕಾರದವರು ಎಷ್ಟು ಹೊರ ದೇಶಗಳ ಬಂಡವಾಳಗಾರರನ್ನು ಆಹ್ವಾನಿಸಿದ್ದಾರೆ?

ಆ) ಈ ಪೈಕಿ ಯಾವ ಯಾವ ರಾಷ್ಟ್ರಗಳಿಂದ ಯಾವ ಯಾವ ಕಂಪನಿಯವರು ಅಥವಾ ಖಾಸಗಿ ಉದ್ಯಮಿಗಳು ಈ ರಾಜ್ಯಕ್ಕೆ ಬರಲು ಒಪ್ಪಿದ್ದಾರೆ; ಮತ್ತು ಯಾವ ಷರತ್ತುಗಳ ಮೇಲೆ ಅವರು ಬರುವವರಿದ್ದಾರೆ?

ಇ) ವಿದೇಶಿ ಬಂಡವಾಳಗಾರರು ಎಷ್ಟೆಷ್ಟು ಬಂಡವಾಳಗಳನ್ನು ಯಾವ ಯಾವ ಕೈಗಾರಿಕೆಗಳ ಸ್ಥಾಪನೆಗೆ ಹೂಡಲು ಮುಂದೆ ಬಂದಿದ್ದಾರೆ.

ಈ) ರಾಜ್ಯ ಸರ್ಕಾರದವರು ಅವರುಗಳಿಗೆ ಕೊಡಲು ಒಪ್ಪಿರುವ ಅನುಕೂಲಗಳೇನು?

ಉ) ರಾಜ್ಯ ಸರ್ಕಾರಕ್ಕೂ ವಿದೇಶಿ ಬಂಡವಾಳಗಾರರಿಗೂ ಆಗಿರುವ ಒಪ್ಪಂದಗಳೇನು?

ಊ) ಈ ರೀತಿ ಸ್ಥಾಪಿಸಲ್ಪಡುವ ಕೈಗಾರಿಕೆಗಳಲ್ಲಿ ಈ ರಾಜ್ಯದ ಎಷ್ಟು ಜನ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವ ಭರವಸೆ ನೀಡಿದ್ದಾರೆ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು): ಅ) ಸರ್ಕಾರವು ಎಲ್ಲಾ ಅರ್ಹ ವಿದೇಶಿ ಬಂಡವಾಳದಾರರನ್ನು ರಾಜ್ಯದಲ್ಲಿ ಬಂಡವಾಳ ಹೂಡಲು ಆಹ್ವಾನಿಸಿದೆ.

ಆ) ಯಾವುದೇ ನಿಖರವಾದ ಒಪ್ಪಿಗೆಯನ್ನು ನೀಡಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಯೋಜನೆಗಳನ್ನು ರಾಜ್ಯದ ಕೈಗಾರಿಕಾ ನೀತಿಗೆ ಅನುಸಾರವಾಗಿ ಪರಿಶೀಲಿಸಿ ಸೂಕ್ತವಾದ ರಿಯಾಯಿತಿ ಮತ್ತು ಪ್ರೋತ್ಸಾಹಗಳನ್ನು ನೀಡಲಾಗುವುದು.

ಉ) ಇಲ್ಲ.

ಊ) ಪ್ರಸ್ತಾವನೆಗಳು ಬಂದು ಅವುಗಳನ್ನು ಸರ್ಕಾರ ಅನುಮೋದಿಸಿದ ಮೇಲೆ ಈ ವಿವರಗಳು ಲಭ್ಯವಾಗುವುದು.

ಶ್ರೀ ವೈ. ರಾಮಕೃಷ್ಣಮ : (ಅ) ಪ್ರಶ್ನೆಗೆ ಉತ್ತರವಾಗಿ ಯಾವುದೇ ನಿಖರವಾದ ಒಪ್ಪಿಗೆಯನ್ನು ನೀಡಿರುವುದಿಲ್ಲವೆಂದು ಹೇಳಿದ್ದೀರಿ. ಆದರೆ ದಿನಾಂಕ 21-3-95 ರಂದು 332ನೇ ಪ್ರಶ್ನೆಗೆ ಉತ್ತರವನ್ನು ಕೊಡುವಾಗ ತಾವು ಏನು ಹೇಳಿದ್ದೀರಿ ಅಂದರೆ 19 ಸಂಸ್ಥೆಗಳ ಜೊತೆ ನಾವು ಮಾತುಕತೆ ನಡೆಸಿದ್ದೇವೆ. ಅವುಗಳ ಪೈಕಿ 6 ಸಂಸ್ಥೆಗಳು ಬೆಂಗಳೂರಿಗೆ ಬಂದಿವೆ ಎಂಬುದಾಗಿ ಹೇಳಿದ್ದೀರಿ. ಅದನ್ನು ಓದುತ್ತೇನೆ. ಆ 19 ಸಂಸ್ಥೆಗಳ ಜೊತೆ ಮಾತನಾಡಿದ್ದೇವೆ. ಅದರ ಪ್ರತಿಫಲವಾಗಿ 6 ಸಂಸ್ಥೆಗಳ ಪ್ರತಿನಿಧಿಗಳು ಬೆಂಗಳೂರಿಗೆ ಭೇಟಿ ನೀಡಿದ್ದಾರೆ ಎಂದು ಹೇಳಿದ್ದೀರಿ. Voxwagn A.M. International and Nazouk of Japan etc., ಆ ಇಂಡಸ್ಟ್ರೀಸ್‌ನ ಪ್ರತಿನಿಧಿಗಳು ಬೆಂಗಳೂರಿಗೆ ಭೇಟಿ ನೀಡಿರುತ್ತಾರೆ. ಮತ್ತು ಯೋಜನೆಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಕ್ರಿಯಾ ಯೋಜನೆಯನ್ನು ತಯಾರಿಸಿರುತ್ತೇವೆ ಎಂದು ಹೇಳಿದ್ದೀರಿ. ಆದರೆ ಇದರಲ್ಲಿ ಏನು ಹೇಳಿದ್ದೀರಿ ಅಂದರೆ ಯಾವುದೇ ನಿಖರವಾದ ಒಪ್ಪಿಗೆ ನೀಡಿರುವುದಿಲ್ಲ ಅಂತ. I want specific answer from the Minister.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗೆ ಕಳೆದ ಮೂರು ತಿಂಗಳಲ್ಲಿ "The number of foreign investers whom the Government have invited during the last 3 months following the liberalisation of industrial policy of the Government" ಅಂತ ಕೇಳಿದ್ದಕ್ಕೆ ನಾವು ಉತ್ತರ ಕೊಟ್ಟಿದ್ದೇವೆ. ಯಾರು ಎಲಿಜಿಬಲ್ ಇದ್ದರೋ ಅವರನ್ನು ವೆಲ್‌ಕಮ್ ಮಾಡಿದ್ದೇವೆ. ನಿರ್ದಿಷ್ಟವಾದ ಯೋಜನೆ ಇಲ್ಲದವರಿಗೆ ವೆಲ್‌ಕಮ್ ಮಾಡಿಲ್ಲ.

"The names of companies or the private entrepreneurs and the countries, who have agreed to come to this that and the terms on which they are coming" ಎಂದು ಕೇಳಿರುವುದಕ್ಕೆ ನಾವು ಇಸ್ರೇಲ್‌ಗೆ ಹೋದಾಗ ಮಾಡಿದಂತಹ ಎಂ.ಒ.ಯು.ಎಸ್.ಗಳು. ಅವುಗಳಲ್ಲಿ MOUs for cooperation, MOUs for demonstration ಎಂದು ಇದೆ. ತಮ್ಮ ಪ್ರಶ್ನೆ ಏನೆಂದರೆ ಎಷ್ಟು ಕೈಗಾರಿಕೆಗಳವರ ಜೊತೆ ಒಪ್ಪಂದ ಮಾಡಿದ್ದೀರಿ, ಎಷ್ಟು ಬಂಡವಾಳ ಬರುತ್ತಿದೆ, ಅದರಿಂದ ಎಷ್ಟು ಎಂಪ್ಲಾಯಿಮೆಂಟ್ ಜನರೇಟ್ ಆಗಬಹುದು; ನಾನು ಉತ್ತರ ಹೇಳಿದ್ದೇನೆ. ಸ್ಪೆಸಿಫಿಕ್ ಆಗಿ ಇಲ್ಲಿಯತನಕ ಯಾರಿಂದಲೂ ಪ್ರಪೋಸಲ್ಸ್ ಬಂದಿರುವುದಿಲ್ಲ. ಎಲ್ಲಿಯತನಕ ಗೌರ್ನಮೆಂಟ್ ಪ್ರಪೋಸಲ್ಸ್‌ಗೆ

ಕ್ಲಿಯರೆನ್ಸ್ ಕೊಡುವುದಿಲ್ಲ, ಅಲ್ಲಿಯತನಕ ಎಲ್ಲವೂ ಕಷ್ಟವಾಗಬಹುದು ಎಂದು ಹೇಳಿದ್ದೇನೆ.

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೇ, ಅವರು ಹೇಳಿರತಕ್ಕದ್ದು ಕ್ರಿಯಾ ಯೋಜನೆಯನ್ನು ಆಗಲೇ ತಯಾರಿಸಲಾಗಿದೆಯೆಂದು. You have already prepared. ಅದರ ಬಗ್ಗೆ ಒಂದು ಉದಾಹರಣೆಯನ್ನು ತಮಗೆ ಕೊಡಬೇಕಾದರೆ ಕಾರು, ಅದನ್ನು ಮ್ಯಾನುಫ್ಯಾಕ್ಚರ್ ಮಾಡತಕ್ಕದ್ದುಕ್ಕೆ ಬೆಂಗಳೂರು-ನೆಲಮಂಗಲ ಮಧ್ಯೆ ಸ್ಥಳ ಪರಿಶೀಲನೆ ನಡೆಸಲಾಗಿದೆಯೆಂದು. ಹಾಗೆ ಎಷ್ಟು ಮಾಡಿದ್ದೀರಿ? ಅದು ನಾನು ಕೇಳತಕ್ಕ ಪ್ರಶ್ನೆ, ಇದರಲ್ಲಿ ಕ್ರಿಯಾ ಯೋಜನೆಯನ್ನು ತಯಾರಿಸಿದ್ದೇವೆಂದು ಡೆಫನೆಟ್ಟಾಗಿ ಹೇಳಿರುವಾಗ ಈವೊಂದು ತಮ್ಮ ಉತ್ತರದಲ್ಲಿ 'ಉದ್ಭವಿಸುವುದಿಲ್ಲ' ವೆಂದು ಹೇಳಿದರೆ ಹೇಗೆ? ಮೊನ್ನೆ ಸೋಮವಾರ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ, ಇವತ್ತು ಕೇಳಿದರೆ ಅದು 'ಉದ್ಭವಿಸುವುದಿಲ್ಲ'ವೆಂದರೆ ಇದರಲ್ಲಿ ಯಾವುದು ಸತ್ಯ?

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸದಸ್ಯರು ಯಾವುದೋ ಅಗ್ರಿಮೆಂಟ್ ಪ್ರಪೋಸಲ್ಸ್ ಬಗ್ಗೆ ರೆಫರ್ ಮಾಡುತ್ತಿದ್ದಾರೆ; ಅದು ಅಗ್ರಿಕಲ್ಚರ್‌ಸೆಕ್ಟಾರ್‌ದು. ತಾವು ಅಗ್ರಿಕಲ್ಚರ್‌ಕ್ಟಾರ್ ಬಗ್ಗೆ ರೆಫರ್ ಮಾಡುತ್ತಾ ಇದ್ದಿರಿ. ನಾನು ಇಲ್ಲಿ ಪ್ರಶ್ನೆ ಕೇಳಿರುವುದು ಇಂಡಸ್ಟ್ರೀಸ್ ಬಗ್ಗೆ, ತಾವು ಬರೆಬೇಕೆಂದು ಹೇಳಿದ್ದೀರಿ ಅವರು ಬಂದಿದ್ದಾರೆ. ಇಲ್ಲಿ ಹೇಗೆ ಅದರ ಡೀಟೈಲ್ಸ್ ಕೊಟ್ಟಿಲ್ಲ. ಎಲ್ಲಿಯತನಕ ಪ್ರಪೋಸಲ್ಸ್ ಕೊಡುವುದಿಲ್ಲ, ಅಲ್ಲಿಯತನಕ ಗೌರ್ನಮೆಂಟ್ ಅಪ್ರೂವಲ್ ಮಾಡುವುದಿಲ್ಲ. How can I say that the project has come? It is just in the preliminary stage.

ಶ್ರೀ ವೈ. ರಾಮಕೃಷ್ಣ : ಕ್ರಿಯಾ ಯೋಜನೆಯನ್ನು ನೀವು ಯಾವುದಕ್ಕೆ ತಯಾರು ಮಾಡಿದ್ದೀರಿ ಹೇಳಿ? ಕ್ರಿಯಾ ಯೋಜನೆಗಳನ್ನು ತಯಾರು ಮಾಡಿದ್ದೇವೆಂದು ಹೇಳಿದ್ದೀರಿ ಯಾವ ಇಂಡಸ್ಟ್ರೀಸ್‌ಗೆ ಕ್ರಿಯಾ ಯೋಜನೆ ಮಾಡಿದ್ದೀರಿ?

ಶ್ರೀ ಆರ್.ವಿ. ದೇಶಪಾಂಡೆ : ತಾವು ಬೇಕಾದರೆ ನೇರವಾಗಿ ನನ್ನನ್ನು ಕೇಳಬಹುದು. ಕಳೆದ ಮೂರು ತಿಂಗಳಿನಲ್ಲಿ ಎಷ್ಟು ಇಂಡಸ್ಟ್ರೀಸ್ ಬಂದಿವೆಯೆಂದು ಕೇಳಬಹುದು. ಮಾರ್ಚಿ ತಿಂಗಳಿನಲ್ಲಿ ಯಾವ ರೀತಿ ಮಾಡುತ್ತೀರಿಯೆಂದು. ಮಾನ್ಯ ಮುಖ್ಯಮಂತ್ರಿಗಳು ನಾನು ದಾವೋಸ್‌ಗೆ ಹೋಗಿದ್ದೆವು, ಇಸ್ರೇಲ್‌ಗೆ ಹೋಗಿದ್ದೆವು ಅಲ್ಲಿ ಹಲವಾರು ದೊಡ್ಡ ದೊಡ್ಡ ಕಂಪನಿಗಳ ಮಾಲೀಕರು ಭೇಟಿಯಾಗಿದ್ದರು. ಬಾಟಾದವರು ಭೇಟಿಯಾಗಿದ್ದರು, ಎಬಿಬಿ ಯಾರು ಭೇಟಿಯಾಗಿದ್ದರು, ಡಿಸಿಎಂದವರು ಭೇಟಿಯಾಗಿದ್ದರು, ನೆಸ್ಟ್‌ಲೇದವರು ಭೇಟಿಯಾಗಿದ್ದರು. ಆದರೆ ಯಾರೂ ಸ್ಪಷ್ಟವಾಗಿ ಇಂತಹ ಕೈಗಾರಿಕೆಗಳನ್ನು ತರುತ್ತೇವೆಂದು ನಮಗೆ ಹೇಳಲಿಲ್ಲ. ಇಸ್ರೇಲ್‌ಗೆ ಹೋದಾಗ 5 ಎಂಒಯುಗೆ ಸಹಿ ಆಗಿವೆ. ನಮ್ಮ ಕೆಎಸ್‌ಎಸ್‌ಐಡಿಸಿ ಅದು ಮುಖ್ಯವಾಗಿ ಅಗ್ರಿಕಲ್ಚರ್ ಸೆಕ್ಟಾರ್‌ನಲ್ಲಿ ಡಮಾನ್‌ಸ್ಟ್ರೇಟ್ ಮಾಡಲಿಕ್ಕೆ ಅಥವಾ ಬೇರೆ ಕೃಷಿಯಲ್ಲಿ ಟೆಕ್ನಾಲಜಿಯನ್ನು ನಾವು ಹೇಗೆ ತರಲಿಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಪರಿಶೀಲನೆ ಮಾಡುತ್ತಿದ್ದವೇಯೇ ವಿನಹ, ಬೇರೆ ಯಾವುದೇ ಕೈಗಾರಿಕೆಯಲ್ಲಿ ಬರುವ ಯಾವುದೇ ಪ್ರಸ್ತಾವನೆಗೆ ಸಹಿ ಆಗಲಿಲ್ಲ.

ಶ್ರೀ ವೈ. ರಾಮಕೃಷ್ಣ : ಹಾಗಾದರೆ ಯಾವ ಕ್ರಿಯಾ ಯೋಜನೆಯೂ ತಯಾರಾಗಿಲ್ಲವೆಂದು ನಾವು ತಿಳಿದುಕೊಳ್ಳಬಹುದೇ?

ಶ್ರೀ ಆರ್.ವಿ. ದೇಶಪಾಂಡೆ : ಹೌದು. For starting of a industry, yes.

ಶ್ರೀ ವೈ. ರಾಮಕೃಷ್ಣ : ಸ್ವಾಮಿ, (ಈ) ಪ್ರಶ್ನೆಗೆ ಉತ್ತರ ಕೊಡುವಾಗ ಯೋಜನೆಗಳನ್ನು ರಾಜ್ಯದ ಕೈಗಾರಿಕಾನೀತಿಗನುಸಾರವಾಗಿ ಪರಿಶೀಲಿಸಿ ಸೂಕ್ತವಾದ

ರಿಯಾಯಿತಿಗಳನ್ನು ಕೊಡುತ್ತೀರಾ? I would like to know from you whether land and elecctricity are going to be given from the State.?

ಶ್ರೀ ಆರ್.ವಿ. ದೇಶಪಾಂಡೆ : ನಮ್ಮದು ಒಂದು ಕೈಗಾರಿಕಾ ನೀತಿಯಿದೆ. ಕೈಗಾರಿಕಾ ಇಂಡಸ್ಟ್ರಿಯಲ್ ಪಾಲಿಸಿಯಿದೆ. ಆ ಪಾಲಿಸಿ ಪ್ರಕಾರ ಕೆಲವು ರಿಯಾಯಿತಿಗಳನ್ನು ನಾವು ಕೊಡುತ್ತೇವೆ ಅದು ಎಲ್ಲರಿಗೂ ಅಲ್ಲ those who come under that category. ಸ್ಮಾಲ್ ಇಂಡಸ್ಟ್ರೀಸ್ ಇದ್ದರೆ ಅವರಿಗೂ ಇದೆ, ಲಾರ್ಜ್‌ಸ್ಕೇಲ್ ಇಂಡಸ್ಟ್ರೀಸ್ ಇದ್ದರೆ ಅವರಿಗೂ ಇದೆ, 100 ಕೋಟಿ ರೂಪಾಯಿ ಪ್ರಾಜೆಕ್ಟ್ ಇದ್ದರೆ ಸ್ಪೆಷಲ್ ಕನ್ಸೇಷನ್ ಇದೆ ಅದನ್ನು ಕೊಡುತ್ತೇವೆ. ಆದರೆ ಲ್ಯಾಂಡ್ ಆಗಲಿ, ಎಲೆಕ್ಟ್ರಿಸಿಟಿಯಾಗಲೀ ಯಾವುದನ್ನು ಫ್ರೀ ಕೊಡುವುದಿಲ್ಲ. That is always against payment. The Karnataka Industrial Area Development Board will acquire the land and hand over. ಕೆಇಬಿಯವರು ಹಣ ತೆಗೆದುಕೊಂಡು ಪವರ್ ನ್ಯಾಂಕ್ಷನ್ ಕೊಡುತ್ತಾರೆ. ನಾವೇನು ಕೊಡುತ್ತೇವೆಂದರೆ, ಅವರು ಟ್ಯಾಕ್ಸ್ ಕನ್ಸೇಷನ್ ಕೇಳಬೇಕಾದರೆ ಸೇಲ್ಸ್‌ಟ್ಯಾಕ್ಸ್, ಎಂಟ್ರಿಟ್ಯಾಕ್ಸ್ ಟರ್ನ್‌ಓವರ್ ಟ್ಯಾಕ್ಸ್ ಕನ್ಸೇಷನ್ ಅನ್ನು ಕೊಡಲಿಕ್ಕೆ ಇಂಡಸ್ಟ್ರೀಸ್ ಪಾಲಿಸ ಇದೆ ಆ ಪಾಲಿಸಿಯ ಪ್ರಕಾರ ನಾವು ಕೊಡುತ್ತೇವೆ.

ಶ್ರೀ ವೈ. ರಾಮಕೃಷ್ಣ : ಆದರೆ ನಮ್ಮಲ್ಲಿರತಕ್ಕ ಇಂಡಸ್ಟ್ರಿಸ್‌ಗಳಿಗೆ ಗೃಹಬಳಕೆಗೆ ಎಲೆಕ್ಟ್ರಿಸಿಟಿ ಇಲ್ಲದಿರುವಾಗ, ಕುಡಿಯುವ ನೀರಿಗೆ ಇಲ್ಲದಿರುವಾಗ ತಾವು ಇಂಡಸ್ಟ್ರೀಸ್‌ಗಳಿಗೆ ಯಾವ ರೀತಿ ಕೊಡುವುದಕ್ಕೆ ಅನುಮತಿಯನ್ನು ಕೊಡುತ್ತೀರಿ?

ಅಧ್ಯಕ್ಷರು : ಮಾನ್ಯ ಸದಸ್ಯರು ಪವರ್ ಬಗ್ಗೆ ಕೇಳುತ್ತಿದ್ದಾರೆ, ನೀವು ಪವರ್ ಮಿನಿಸ್ಟರೇ?

ಶ್ರೀ ಆರ್.ವಿ. ದೇಶಪಾಂಡೆ : ಆದರೂ, ಅವರು ಕೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ ಅವರು ಕೇಳಿದ ಪ್ರಶ್ನೆ ಮುಖ್ಯವಾದುದಾಗಿದೆ. ಒಂದು ಕಡೆ ನಮಗೆ ಪವರ್ ಇಲ್ಲ ನೀವು ಹೇಗೆ ಹೊಸ ಇಂಡಸ್ಟ್ರಿಗಳನ್ನು ಬೆಳೆಸುತ್ತೀರಿ ಅಂದರೆ, ಪವರ್‌ಜನರೇಷನ್ ಬಗ್ಗೆ ತಗೆ ಗೊತ್ತಿದೆ ನಮ್ಮ ಬಜೆಟ್ ಭಾಷಣದಲ್ಲಿ ನಾವು ಹೇಳಿದ್ದೇವೆ. Irrigation and power they are priority sectors. Power generation ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. ಬರುವ ಎರಡು-ಮೂರು ವರ್ಷಗಳಲ್ಲಿ ಪವರ್ ಜನರೇಷನ್ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಈಗ ಹುಣಸೇಬೀಜ ಹಾಕಿದ್ದಾರೆ, ರ ಬೆಳೆದ ಮೇಲೆ ಹುಣಸೇಕಾಯಿ ಆಮೇಲೆ ಹಣ್ಣು ಬರುತ್ತದೆ ಎಂದು ಹೇಳುತ್ತಾರೆ. ನೀವು ಈಗ ಹೋಗಿ ಸಹಿ ಮಾಡಿ ಬಂದಿದ್ದೀರಲ್ಲ ನಾಳೆ ಬೆಳಿಗ್ಗೆ ಅವರು ನಮ್ಮ ರಾಜ್ಯಕ್ಕೆ ಬಂದರೆ ನೀವು ಅವರಿಗೆ 4 ವರ್ಷಗಳ ನಂತರ ಪವರ್ ಜನರೇಟ್ ಮಾಡಿ ಪವರ್ ಕೊಡುತ್ತೇವೆಂದರೆ ಅವರು ಎಣ್ಣೆದೀಪ ಹಚ್ಚಿಕೊಂಡು ಕಾರ್ಖಾನೆ ನಡೆಸಿ ಎಂದು ಹೇಳುತ್ತೀರೋ?

ಶ್ರೀ ಆರ್.ವಿ. ದೇಶಪಾಂಡೆ : ನನ್ನ ಕಾಲದಲ್ಲಿ ಎಲ್ಲಾ ಕೈಗಾರಿಕೆಗಳನ್ನು ಚೆನ್ನಾಗಿ ನಡೆಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಕಾಲದಲ್ಲಿ ದೀಪ ಹಾಕಿ ಇವರ ಕಾಲದಲ್ಲಿ ಚೆನ್ನಾಗಿ ನಡೆಸುತ್ತಾರೆ ಅದು ಮುಂದೆ ಗೊತ್ತಾಗುತ್ತದೆ. ಟೈರುಟ್ಯೂಬ್ ಇಲ್ಲದೆ ಕಾರು ಓಡಿಸುತ್ತೀರಾ ನಿಮ್ಮ ಕಾಲದಲ್ಲಿ?

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ರಾಮಕೃಷ್ಣರವರು ಕೇಳಿದ ಪ್ರಶ್ನೆ ಸೂಕ್ತವಾಗಿದೆ. ಒಂದು ಕಡೆ ವಿದ್ಯುಚ್ಛಕ್ತಿ ಇಲ್ಲ ನೀವು ಹೇಗೆ ಕೈಗಾರಿಕೆಗಳನ್ನು

ಬೆಳೆಸುತ್ತೀರಿ ಅಂದರೆ, ಯಾರು ಕೈಗಾರಿಕೆಗಳನ್ನು ಪ್ರಾರಂಭ ಮಾಡಲಕ್ಕೆ ಬರುತ್ತಿದ್ದಾರೆ ಪ್ರೈವೇಟ್ ಜನ ಅವರೇ ಜನರೇಟ್ ಮಾಡಿಕೊಳ್ಳಲಿಕ್ಕೆ ಮುಂದೆ ಬರುತ್ತಿದ್ದಾರೆ. ಅವರು ಪವರನ್ನು ಮೂರನೆಯ ಎರಡು ಭಾಗ ಕೊಡಿ ಉಳಿದ ಪವರನ್ನು ನಾವೇ ಜನರೇಟ್ ಮಾಡಿಕೊಳ್ಳುತ್ತೇವೆಂದು ಕೇಳುತ್ತಿದ್ದಾರೆ. 2000ದ ಇಸವಿಯ ಹೊತ್ತಿಗೆ 9 ಸಾವಿರ ಮೆಗಾವ್ಯಾಟ್ ವಿದ್ಯುತ್ ನಮಗೆ ಬೇಕಾಗುತ್ತದೆ. ಆ ಪವರ್ ಜನರೇಟ್ ಮಾಡಲಿಕ್ಕೆ ಸರ್ಕಾರ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತಿದೆ. ಉದಾಹರಣೆಗೆ ಕೊಜೆಂಟ್ರಿಕ್ಸ್‌ನವರ ಜೊತೆಗ ಪ್ರಾಜೆಕ್ಟ್ ಅಗ್ರಿಮೆಂಟ್‌ಗೆ ಸಹಿ ಮಾಡಿದ್ದೇವೆ. ಎರಡು-ಮೂರು ವರ್ಷಗಳಲ್ಲಿ ಪ್ರಾಜೆಕ್ಟ್ ರೆಡಿಯಾಗುತ್ತದೆ. ಕ್ಲಿಯರ್ ಪ್ರಾಜೆಕ್ಟ್‌ಗಳಿವೆ, ನಾಳೆ ದೊಡ್ಡ ಕೈಗಾರಿಕೆಗಳು ಬಂದರೆ ಎರಡು ಮೂರು ವರ್ಷಗಳಲ್ಲಿ ಪವರ್ ಜನರೇಟ್ ಆಗುತ್ತದೆ. Industries and power generattion they have to go hand in hand, simulaaneously. ತಮ್ಮ ಪ್ರಶ್ನೆ ಬಹಳ ಮುಖ್ಯವಾದುದು ಇದೆ. ಅದರ ಬಗ್ಗೆ ಸೂಕ್ತಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ವೈ. ರಾಮಕೃಷ್ಣ : ಯಾರದಾದರೂ ಎಕ್ಸ್‌ಪರ್ಟ್ ಕಮಿಟಿ ಮಾಡಿ ಅವರ ಅಭಿಪ್ರಾಯ ಪಡೆದು ಅದನ್ನು ತೆಗೆದುಕೊಂಡು ಬಂದಿದ್ದೀರೋ? ಹಾಗೆ ಮಾಡಿದ ಪಕ್ಷಕ್ಕೆ ಆ ಎಕ್ಸ್‌ಪರ್ಟ್ ಕಮಿಟಿಯಲ್ಲಿ ಯಾರ್ಯಾರು ಇದ್ದಾರೆ?

ಅಧ್ಯಕ್ಷರು : ಇಂಡಸ್ಟ್ರೀಸ್‌ಗಳಲ್ಲಿ ಇನ್‌ವೆಸ್ಟ್ ಮಾಡಲಿಕ್ಕೆ, ಎಕ್ಸ್‌ಪರ್ಟ್ ಕಮಿಟಿಗಳನ್ನು ಕಾನ್ಸ್ಟಿಟ್ಯುಟ್ ಮಾಡಿದ್ದೀರೋ, ಹಾಗೆ ಮಾಡಿದ್ದರೆ ಆ ಎಕ್ಸ್‌ಪರ್ಟ್ ಕಮಿಟಿಯಲ್ಲಿ ಯಾರ್ಯಾರು ಇದ್ದಾರೆ ಅವರ ಹೆಸರುಗಳನ್ನು ಕೊಡಿಯೆಂದು ಕೇಳುತ್ತಿದ್ದಾರೆ.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಯಾರಾದರೂ ಒಬ್ಬರು ಪ್ರಶ್ನೆ ಕೇಳಿದರೆ ಎಷ್ಟು ಉಪ ಪ್ರಶ್ನೆಗಳನ್ನು ಕೇಳಬಹುದೆಂದು ತಾವು ಹೇಳಬೇಕಾಗುತ್ತದೆ?

ಅಧ್ಯಕ್ಷರು : ನಾರಾಯಣಸ್ವಾಮಿಯವರೇ ಅದರ ಬಗ್ಗೆ ಆಮೇಲೆ ಚರ್ಚೆ ಮಾಡೋಣ.

ಶ್ರೀ ಎಂ. ನಾರಾಯಣಸ್ವಾಮಿ : ಸರ್ಕಾರ ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡಲಿ ಅದಕ್ಕೆ ನನ್ನ ಅಭ್ಯಂತರವೇನು ಇಲ್ಲ. ಆದರೆ ಒಂದು ಪ್ರಶ್ನೆ ಕೇಳಿದರೆ ಎಷ್ಟು ಉಪಪ್ರಶ್ನೆಗಳನ್ನು ಕೇಳಬಹುದೆಂದು ತಾವು ಹೇಳಬೇಕಾಗುತ್ತದೆ. ಸಿಕ್ಕಿದ ಹಾಗೆ ಎಲ್ಲರು ಮಾತನಾಡುವುದಿಲ್ಲ.

ಅಧ್ಯಕ್ಷರು : ಹಾಗೆ ಮಾತನಾಡಬಾರದು, ತಾವು ದಯಮಾಡಿ ಕುಳಿತುಕೊಳ್ಳಿ. ನಿಮ್ಮ ಕೈಯಲ್ಲಿ ಆಡಳಿತ ಇದೆ. ವಿರೋಧ ಪಕ್ಷದವರು ಅಷ್ಟೂ ಮಾಡಬಾರದೇ? ಕುಳಿತುಕೊಳ್ಳಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಹಿರಿಯಸದಸ್ಯರಾದ ರಾಮಕೃಷ್ಣರವರು ಎಕ್ಸ್‌ಪರ್ಟ್ ಮಾಡಿದ್ದೀರಾ ಎಂದು ಕೇಳಿದರು. ಎಲ್ಲಾ ಕೈಗಾರಿಕೆಗಳಿಗೆ ಎಕ್ಸ್‌ಪರ್ಟ್ ಕಮಿಟಿಯಾಗುವುದಿಲ್ಲ. ಕೈಗಾರಿಕೆಗಳನ್ನು ಮಾಡುವವರು ತಮ್ಮ ಪ್ರಪೋಸಲ್ಸ್ ತೆಗೆದುಕೊಂಡು ಬರುತ್ತಾರೆ. ಸಣ್ಣ ಕೈಗಾರಿಕೆಗಳು ಇದ್ದರೆ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಕ್ಲಿಯರ್ ಆಗುತ್ತದೆ. 50ಕೋಟಿ ರೂಪಾಯಿ ಒಳಗೆ ಇದ್ದರೆ ಪ್ರಿನ್ಸಿಪಲ್ ಸೆಕ್ರೆಟರಿಯವರು ಛೇರ್‌ಮನ್ ಇರುತ್ತಾರೆ. If it exceeds Rs. 50 Crores, it comes to the High Power Committee which I head. ತಾವು ಕೇಳಿದ ಹಾಗೆ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಬರುತ್ತಾ ಇದೆ. ಅದಕ್ಕೆ ನಾವು ಒಂದು ಎಕ್ಸ್‌ಪರ್ಟ್ ಕಮಿಟಿ ಅಂತ ಮಾಡಿದ್ದೇವೆ. ಅದಕ್ಕೆ ಮುಖ್ಯ ಕಾರ್ಯದರ್ಶಿಯವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಅವರ ರೆಕಮೆಂಡೇಷನ್ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ವಿಜಯನಗರ ಸ್ಟೀಲ್‌ಪ್ಲಾಂಟನ್ನು ಹಿಂದಿನ ಸರ್ಕಾರದವರು ಮಾಡಿದಾಗ ಅವರೊಂದು ಎಕ್ಸ್‌ಪರ್ಟ್ ಕಮಿಟಿ ಮಾಡಿದ್ದರು.

ಅವರು ಅವರ ಅಭಿಪ್ರಾಯವನ್ನು ತೆಗೆದುಕೊಂಡು ಮಾಡಿದ್ದಾರೆ. ವಿಜಯನಗರ ಎರಡನೆಯ ಸ್ಟೀಲ್‌ಪ್ಲಾಂಟ್ ಬರುತ್ತಾ ಇದೆ. ಇದಕ್ಕೆ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿದ್ದೇವೆ. ಎಲ್ಲೆಲ್ಲಿ ಸೆನ್ಸಿಟಿವ್ ಇರುತ್ತದೆ ಅಲ್ಲಿ ಎಕ್ಸ್‌ಪರ್ಟ್ ಕಮಿಟಿ ಬೇಕಾಗುತ್ತದೆ. ಅಂಥ ಕಡೆಗಳಲ್ಲಿ ಎಕ್ಸ್‌ಪರ್ಟ್ ಕಮಿಟಿ ಮಾಡಿ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೇವೆ. ಪ್ರೈವೇಟ್ ಜನ ಏನು ಕೈಗಾರಿಕೆಗಳನ್ನು ಮಾಡಲಿಕ್ಕೆ ಬರುತ್ತಾರೆ ಅವರ ಪ್ರಾಜೆಕ್ಟ್ ರಿಪೋರ್ಟ್ ಮೇಲೆ ನಾವು ಡಿಸಿಷನ್ ತೆಗೆದುಕೊಳ್ಳುತ್ತೇವೆ ಅಷ್ಟೆ.

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರ ಕೊಡುವಾಗ ದಯಮಾಡಿ ಸಂಕ್ಷಿಪ್ತವಾಗಿ ಉತ್ತರ ಕೊಡಿ. ಉತ್ತರ ಕೊಡುವಾಗ ಹೀಗೆ ಹೆಚ್ಚು ಸಮಯವನ್ನು ತೆಗೆದುಕೊಂಡರೆ ನಾನು ಪ್ರಶ್ನೋತ್ತರವೇಳೆಯನ್ನು ನಡೆಸುವುದು ಬಹಳ ಕಷ್ಟವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಂತ್ರಿಗಳು ವಿರೋಧಪಕ್ಷದ ನಾಯಕರಾಗಿದ್ದರು ಅದು ಅಭ್ಯಾಸಬಲ ಏನು ಮಾಡುವುದು.

ತುಮಕೂರು ನಗರಕ್ಕೆ ಒಳಚರಂಡಿ ವ್ಯವಸ್ಥೆ

373 - ಶ್ರೀ ಎನ್. ಶಿವಣ್ಣ (ತುಮಕೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ನಗರಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಮಾಡುವ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಬಂದಿದೆ.

ಆ) ಒಳಚರಂಡಿ ಯೋಜನೆ ಅಂದಾಜು ವೆಚ್ಚ ರೂ. 2,839-00 ಲಕ್ಷಗಳಿಗೆ ಸರ್ಕಾರವು ತಾಂತ್ರಿಕ ಮಂಜೂರಾತಿ ನೀಡಿದೆ. ಆಡಳಿತಾತ್ಮಕ ಮಂಜೂರಾತಿ ಮತ್ತು ಕಾಮಗಾರಿಯನ್ನು ಪ್ರಾರಂಭಿಸುವ ಮುನ್ನ ನಗರಸಭೆಯು ತನ್ನ ಪಾಲಿಗೆಯ 1/3 ಭಾಗವನ್ನು ಪಾವತಿಸಬೇಕು. ಮತ್ತು ಈ ಯೋಜನೆಗೆ ಹಣ ಒದಗಿಸಲು ಹುಡ್ಕೋ ನಿಗಮವು ತನ್ನ ಒಪ್ಪಿಗೆಯನ್ನು ನೀಡಬೇಕಾಗುತ್ತದೆ.

ಶ್ರೀ ಎಸ್. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ ಬಹಳ ಸಂತೋಷ. ಏಕೆಂದರೆ 2.839 ಲಕ್ಷ ರೂಪಾಯಿಗಳನ್ನು ಒಳಚರಂಡಿ ವ್ಯವಸ್ಥೆಗೆ ಮಂಜೂರಾತಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದರೊಳಗೆ ಮೂರನೆಯ ಒಂದು ಭಾಗ ಹಣವನ್ನು ಸರ್ಕಾರವೇ ಭರಿಸಿ ಒಳಚರಂಡಿ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಸರ್ಕಾರ ಕೂಡ ಹಣವನ್ನು ಒದಗಿಸುತ್ತದೆ. ಮೂರನೆಯ ಒಂದು ಭಾಗ ಹಣವನ್ನು ಮುನಿಸಿಪಾಲಿಟಿಯವರು ಕೊಡಬೇಕು.

ಅಧ್ಯಕ್ಷರು : ಅವರು ಅದನ್ನೇ ಹೇಳಿದ್ದುದು. ಅಷ್ಟು ಕಟ್ಟುವುದಕ್ಕೂ ನಮಗೆ ಆಗುವುದಿಲ್ಲ, ಅದನ್ನೂ ನೀವೇ ಭರಿಸುತ್ತೀರಾ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ವೈಜನಾಥ ಪಾಟೀಲ್ : ಸಧ್ಯಕ್ಕಂತೂ ಇಲ್ಲ, ಇದನ್ನು ವಿಚಾರ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಒಂದು ಸಣ್ಣ ಪ್ರಶ್ನೆ.

ಅಧ್ಯಕ್ಷರು : ನೀವು ನಮ್ಮ ಸ್ನೇಹಿತರು. ಈ ಪ್ರಶ್ನೆ ಚಾಮರಾಜನಗರದ್ದೇ?